ಆ ಹಾಗಿದ್ದಲ್ಲಿ, ಕೊಳ್ಳೇಗಾಲ ವಿಧಾನ ಸಭಾ ಕ್ಷೇತ್ರದಲ್ಲಿ 2007–08ನೇ ಸಾಲಿನಲ್ಲಿ ಹೊಸದಾಗಿ ಪ್ರಾರಂಭವಾದ ಪ್ರೌಢಶಾಲೆ ಹಾಗೂ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಸಂಖ್ಯೆ ಎಷ್ಟು;

2007–08ನೇ ಸಾಲಿನಲ್ಲಿ ಹೊಸದಾಗಿ ಪ್ರಾರಂಭವಾದ ಪ್ರೌಢಶಾಲೆಗಳ ಸಂಖ್ಯೆ–ಒಟ್ಟು 5

ಪದವಿ ಪೂರ್ವ ಕಾಲೇಜುಗಳ ಸಂಖ್ಯೆ –1 (ಸಂತೆಮರಳ್ಳಿ)

ಇ ಕೊಳ್ಳೇಗಾಲ ವಿಧಾನ ಸಭಾ ಕ್ಷೇತ್ರದಲ್ಲಿ ಶಾಲಾ ಕೊಠಡಿಗಳ ನಿರ್ಮಾಣಕ್ಕೆ 2007–08ನೇ ಸಾಲಿನಲ್ಲಿ ಬಿಡುಗಡೆ ಮಾಡಿರುವ ಅನುದಾನವೆಷ್ಟು?

ಕೊಳ್ಳೇಗಾಲ ವಿಧಾನ ಸಭಾ ಕ್ಷೇತ್ರಕ್ಕೆ ಶಾಲಾ ಕೊಠಡಿಗಳ ನಿರ್ಮಾಣಕ್ಕೆ 2007–08ನೇ ಸಾಲಿನಲ್ಲಿ ಬಿಡುಗಡೆ ಮಾಡಿರುವ ಅನುದಾನ 21.00ಲಕ್ಷ ರೂ.ಗಳು. ಪದವಿ ಪೂರ್ವ ಕಾಲೇಜಿನ ಕಟ್ಟಡ ನಿರ್ಮಾಣಕ್ಕಾಗಿ ಆರ್.ಐ.ಡಿ.ಎಫ್–11ರಡಿ 17.50 ಲಕ್ಷ ರೂ.ಗಳು ಹಾಗೂ ಆರ್.ಐ.ಡಿ.ಎಫ್–12ರ ರಡಿ 9.80ಲಕ್ಷ ರೂ.ಗಳನ್ನು ಬಿಡುಗಡೆ ಮಾಡಲಾಗಿದೆ.

ಈ ಈ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮವೇನು?

ನಬಾರ್ಡ್‌ನ ಆರ್ಥಿಕ ನೆರವಿನೊಂದಿಗೆ ಹಾಗೂ ರಾಜ್ಯ ಮುಂದುವರೆದ ಯೋಜನಾ ಕಾರ್ಯಕ್ರಮಗಳ ಅಡಿಯಲ್ಲಿ ಪ್ರೌಢಶಾಲಾ ಕೊಠಡಿಗಳನ್ನು ನಿರ್ಮಾಣ ಮಾಡುವುದರ ಮೂಲಕ ಕೊರತೆಯನ್ನು ಸರಿದೂಗಿಸಲಾಗುತ್ತಿದೆ.

ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಕೊಠಡಿಗಳ ಕೊರತೆ ನೀಗಿಸಲು ಆರ್.ಐ.ಡಿ.ಎಫ್–11, 12 ಮತ್ತು 13ರಡಿ ಹಾಗೂ ಅಪೆಂಡಿಕ್ಸ್–ಇ ಯೋಜನೆಗಳಡಿ ಅನುದಾನ ಒದಗಿಸಲಾಗಿದೆ.

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (482)287

2) ಸದಸ್ಯರ ಹೆಸರು : ಶ್ರೀ ಧ್ರುವನಾರಾಯಣ್ ಆರ್. (ಕೊಳ್ಳೇಗಾಲ)

3) ಉತ್ತರಿಸುವ ಸಚಿವರು : (ಶ್ರೀ. ರೇವು ನಾಯಕ ಬೆಳಮಗಿ) ಮಾನ್ಯ ಪಶುಸಂಗೋಪನಾ ಸಚಿವರು

ಅ) ರಾಜ್ಯದಲ್ಲಿ ಪ್ರಾಥಮಿಕ ಪಶುಸಂಗೋಪನಾ ಆಸ್ಪತ್ರೆಗಳ ಸಂಖ್ಯೆ ಎಷ್ಟು?

ರಾಜ್ಯದಲ್ಲಿ ಒಟ್ಟಾರೆ 4110 ವಿವಿಧ ಪಶುವೈದ್ಯ ಸಂಸ್ಥೆಗಳು ಇವೆ ಅವುಗಳ ವಿವರ ಈ ಕೆಳಕಂಡಂತಿದೆ.

ಕ್ರಮ ಸಂಖ್ಯೆ	ಸಂಸ್ಥೆಯ ಹೆಸರು	ಸಂಖ್ಯೆ
1)	ಪಶು ಆಸ್ಪತ್ರೆ	347
2)	ಪಶುಚಿಕಿತ್ಸಾಲಯ	1914

3)	ಪ್ರಾಥಮಿಕ ಪಶುಚಿಕಿತ್ಸಾಲಯ ಕೇಂದ್ರ	1209
4)	ಕೃತಕ ಗರ್ಭಧಾರಣಾ ಕೇಂದ್ರ	401
5)	ಸಂಚಾರಿ ಪಶುಚಿಕಿತ್ಸಾಲಯ	174
6)	ಪ್ರಾದೇಶಿಕ ಪ್ರಯೋಗ ಶಾಲೆ	03
7)	ಪ್ರಧಾನ ಗ್ರಾಮೀಣ ಯೋಜನೆ	04
8)	ಇತರೆ	58
	ಒಟ್ಟು	**4110**

ಆದರೆ ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆಯಲ್ಲಿ ಪ್ರಾಥಮಿಕ ಪಶುಸಂಗೋಪನಾ ಆಸ್ಪತ್ರೆ ಎಂಬ ಹೆಸರಿನ ಯಾವುದೇ ಸಂಸ್ಥೆ ಇರುವುದಿಲ್ಲ.

ಆ) ಈ ಪ್ರಾಥಮಿಕ ಪಶು ಆಸ್ಪತ್ರೆಗೆ ವೈದ್ಯರ ಕೊರತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಹೌದು, ಸರ್ಕಾರದ ಗಮನಕ್ಕೆ ಬಂದಿದೆ.

ಇ) ಹಾಗಿದ್ದಲ್ಲಿ, ಈವರೆಗೆ ಖಾಲಿ ಇರುವ ಪಶುವೈದ್ಯರ ಹುದ್ದೆಗಳೆಷ್ಟು?

ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆಯಲ್ಲಿ ಪ್ರಸ್ತುತ ದಿನಾಂಕ;30-06-2008 ರಲ್ಲಿದ್ದಂತೆ 1038 ಪಶುವೈದ್ಯಾಧಿಕಾರಿ ಮತ್ತು 45 ಸಹಾಯಕ ನಿರ್ದೇಶಕರುಗಳ ಹುದ್ದೆಗಳು ಖಾಲಿ ಇರುತ್ತವೆ.

ಈ) ಕೊಳ್ಳೇಗಾಲ ವಿಧಾನಸಭಾ ಕ್ಷೇತ್ರದಲ್ಲಿ ಪ್ರಾಥಮಿಕ ಪಶುಸಂಗೋಪನಾ ಆಸ್ಪತ್ರೆಗಳ ಸಂಖ್ಯೆ ಎಷ್ಟು?

ಕೊಳ್ಳೇಗಾಲ ವಿಧಾನಸಭಾ ಕ್ಷೇತ್ರದಲ್ಲಿ ಈ ಕೆಳಕಂಡಂತೆ ವಿವಿಧ ಪಶುವೈದ್ಯಕೀಯ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ.

ಕ್ರಮ ಸಂಖ್ಯೆ	ಸಂಸ್ಥೆಯ ಹೆಸರು	ಸಂಖ್ಯೆ
1)	ಪಶು ಆಸ್ಪತ್ರೆ	2
2)	ಪಶು ಚಿಕಿತ್ಸಾಲಯ	8
3)	ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರ	6
4)	ಕೃತಕ ಗರ್ಭಧಾರಣಾ ಕೇಂದ್ರ	8
5)	ಸಂಚಾರಿ ಪಶು ಚಿಕಿತ್ಸಾಲಯ	1
	ಒಟ್ಟು	**25**

ಉ) ಕೊಳ್ಳೇಗಾಲ ವಿಧಾನ ಸಭಾ ಕ್ಷೇತ್ರದಲ್ಲಿ ಪ್ರಾಥಮಿಕ ಪಶು ಆರೋಗ್ಯ ವೈದ್ಯರ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಹೌದು ಸರ್ಕಾರದ ಗಮನಕ್ಕೆ ಬಂದಿದೆ

ಕೊಳ್ಳೇಗಾಲ ವಿಧಾನಸಭಾ ಕ್ಷೇತ್ರದಲ್ಲಿನ ಪಶುಆಸ್ಪತ್ರೆ ಮತ್ತು ಪಶುಚಿಕಿತ್ಸಾಲಯಗಳಲ್ಲಿ 7 ಪಶುವೈದ್ಯಾಧಿಕಾರಿ ಹುದ್ದೆಗಳು ಖಾಲಿ ಇರುತ್ತವೆ. ಖಾಲಿ ಹುದ್ದೆಗಳ ವಿವರ ಈ ಕೆಳಕಂಡಂತಿದೆ.

1)	ಪಶು ಆಸ್ಪತ್ರೆ, ಕೊಳ್ಳೇಗಾಲ	1
2)	ಸಂಚಾರಿ ಪಶು ಚಿಕಿತ್ಸಾಲಯ ಕೊಳ್ಳೇಗಾಲ	1
3)	ಪಶು ಚಿಕಿತ್ಸಾಲಯ, ಕೌದಳ್ಳಿ	1
4)	ಪಶು ಚಿಕಿತ್ಸಾಲಯ, ಬಂಡಳ್ಳಿ	1
5)	ಪಶು ಚಿಕಿತ್ಸಾಲಯ, ಹೂಗ್ಯಂ	1
6)	ಪಶು ಚಿಕಿತ್ಸಾಲಯ, ಮೀಣ್ಯಂ	1
7)	ಪಶು ಚಿಕಿತ್ಸಾಲಯ, ಗೊಲ್ಲರದಿಂಬದ	1
	ಒಟ್ಟು:	7

ಊ) ಈ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮವೇನು?

ರಾಜ್ಯದಲ್ಲಿ ಖಾಲಿ ಇರುವ ಪಶುವೈದ್ಯಾಧಿಕಾರಿಗಳ ಹುದ್ದೆ ಭರ್ತಿ ಮಾಡಲು ಕರ್ನಾಟಕ ಲೋಕಸೇವಾ ಆಯೋಗದಿಂದ 200 ಹುದ್ದೆಗಳಿಗೆ ಪ್ರಕಟಣೆ ನೀಡಿದ್ದು, ನೇರ ನೇಮಕಾತಿ ಮುಖಾಂತರ ಭರ್ತಿ ಮಾಡಲು ಪ್ರಕ್ರಿಯೆ ಪ್ರಾರಂಭವಾಗಿದೆ ಹಾಗೂ 100 ನಿವೃತ್ತ ಪಶುವೈದ್ಯರನ್ನು ಸಹ ಭರ್ತಿ ಮಾಡಲು ಅನುಮತಿ ನೀಡಲಾಗಿದ್ದು, ನೇಮಕಾರಿ ಪ್ರಕ್ರಿಯೆ ಪ್ರಾರಂಭವಾಗಬೇಕಾಗಿದೆ. ಈ ಎರಡು ಹಂತದ ನೇಮಕಾತಿ ಮಾಡುವ ಸಮಯದಲ್ಲಿ ಕೊಳ್ಳೇಗಾಲ ಕ್ಷೇತ್ರದಲ್ಲಿ ಖಾಲಿ ಇರುವ 7 ಪಶುವೈದ್ಯರ ಹುದ್ದೆಗಳನ್ನು ಭರ್ತಿ ಮಾಡಲು ಆದ್ಯತೆ ಮೇಲೆ ಪರಿಗಣಿಸಲಾಗುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (483)288
ಸದಸ್ಯರ ಹೆಸರು : ಶ್ರೀ ಆರ್.ಧ್ರುವನಾರಾಯಣ್
ಉತ್ತರಿಸುವವರು : (ಶ್ರಿ ಎಸ್.ಎನ್.ಕೃಷ್ಣಯ್ಯ ಶೆಟ್ಟಿ) ಮಾನ್ಯ ವಸತಿ ಮತ್ತು ಮುಜರಾಯಿ ಸಚಿವರು

ಅ) ಕೊಳ್ಳೇಗಾಲ ಪಟ್ಟಣದಲ್ಲಿರುವ ಕೊಳಚೆ ಪ್ರದೇಶವನ್ನು ಅಭಿವೃದ್ಧಿ ಪಡಿಸಲು ಸರ್ಕಾರದಿಂದ 2007-08ನೇ ಸಾಲಿನಲ್ಲಿ ಬಿಡುಗಡೆಯಾದ ಅನುದಾನವೆಷ್ಟು?

ಕೊಳ್ಳೇಗಾಲ ಪಟ್ಟಣದಲ್ಲಿರುವ ಕೊಳಚೆ ಪ್ರದೇಶವನ್ನು ಅಭಿವೃದ್ಧಿ ಪಡಿಸಲು ಸರ್ಕಾರದಿಂದ 2007-08ನೇ ಸಾಲಿನಲ್ಲಿ ಯಾವುದೇ ಅನುದಾನ ಬಿಡುಗಡೆಯಾಗಿರುವುದಿಲ್ಲ.